

ಗರ್ಭವನ್ನು ಭೇದಿಸಿ, ಒಳಗೇ ಬಚ್ಚಿಟ್ಟುಕೊಂಡು ಸತತ ಹಿಂಸೆ ನೀಡುವ ಕೆಲವು ಕಹಿ ಸತ್ಯಗಳನ್ನು ಹೊರಗೆಡವಬೇಕಿದೆ. ಆ ಸತ್ಯಗಳ ಹಿಂದಿನ ಹುನ್ನಾರಗಳ ಮರ್ಮವನ್ನು ಮರ್ದಿಸಿ ಸರಳ ಸತ್ಯಗಳನ್ನು ಮನಗಾಣಬೇಕಿದೆ. ಅದಕ್ಕೆ ತಕ್ಕಂತಹ ನೀತಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಚತುರಮತಿಯರಾಗಿ, ತಮ್ಮ ಕಷ್ಟಕ್ಕೆ ಸಿಕ್ಕ ಯಶಸ್ಸಿನ ಪ್ರತಿಫಲವನ್ನು ಅನುಭವಿಸಬೇಕಿದೆ.

## ಯಶಸ್ವಿ ಮಹಿಳೆಯರೇಕೆ ಹೆಚ್ಚು ಒಂಟಿ?

ಯಶಸ್ಸೆಂದರೆ ಮಧುರ, ಸುಂದರ. ಯಶಸ್ಸಿನ ಆ ಉಸಿರಾಟ ಶುದ್ಧ ನಿರಾಳ ಎಂಬೆಲ್ಲ ಕಲ್ಪನೆಗಳಿವೆ. ಆದರೆ, ಯಶಸ್ಸಿನ ಹಾದಿ ಬಹಳ ಭಿನ್ನ.

ಯಶಸ್ಸಿನ ಬೆನ್ನತ್ತಿ ನಡೆಯುವಾಗಲೇ ಆ ಮಹಿಳೆಯರು ಇತರೆ ಸಾಧಾರಣ ಮಹಿಳೆಯರಿಗಿಂತ ಭಿನ್ನ ಹಾದಿಯನ್ನು ಆರಿಸಿಕೊಂಡಿರುತ್ತಾರೆ. ಆ ಹಾದಿಯಲ್ಲಿ ಹೆಚ್ಚು ಜನರಿರುವುದಿಲ್ಲ. ಆದರೆ ಕಷ್ಟಗಳಿರುತ್ತವೆ. ಸವಾಲುಗಳು ಎದುರಾಗುತ್ತವೆ. ಸತ್ವಪರೀಕ್ಷೆಗಳು ನಡೆಯುತ್ತವೆ. ಹಲವು ಸಂದಿಗ್ಧಗಳು, ಜೊತೆಗೆ ಭ್ರಮನಿರಸನಗಳು ಮುಖ ತೋರಿಸುತ್ತವೆ. ಇವು ಸಾಮಾನ್ಯರ ಸಮಸ್ಯೆಗಳಿಗಿಂತ ಭಿನ್ನ ಬಿಕ್ಕಟ್ಟುಗಳಾದ ಕಾರಣ ಅವಕ್ಕೆ ಪರಿಹಾರಗಳನ್ನು ತಮ್ಮದೇ ರೀತಿಯಲ್ಲಿ ಅವರು ಕಂಡುಕೊಳ್ಳಬೇಕಾಗುತ್ತದೆ. ಇಂತಹ ತಲ್ಲೀನತೆಯನ್ನು ಸಾಧಿಸುವ ಪ್ರಯತ್ನದಲ್ಲಿ ಯಶಸ್ವಿ ಮಹಿಳೆಯರು ಒಂಟಿಯಾಗುತ್ತಾರೆ.

ತಮ್ಮ ಸಮಯದ ಬಹುಭಾಗವನ್ನು ಸಾಧನೆಗೆ ನೀಡುವ ಕಾರಣ, ಕುಟುಂಬ, ಸಂಗಾತಿ ಮತ್ತು ಮಕ್ಕಳಿಗೆ ಅವರಲ್ಲಿ ಹೆಚ್ಚು ಸಮಯವಿರುವುದಿಲ್ಲ. ಯಶಸ್ವಿ ಮಹಿಳೆಯರ ಶಿಸ್ತು ಕೆಲವರನ್ನು ಹೆದರಿಸುತ್ತದೆ. ಸ್ನೇಹಿತರು ಒಂದು ಅಳತೆ ದೂರವಾಗುತ್ತಾರೆ. ಆದರೆ, ಸಾಧಿಸಿದ ನಂತರ ಎಲ್ಲರೂ ಹತ್ತಿರವಾಗಬಹುದು. ಆದರೆ, ಅವರನ್ನು ಪ್ರೀತಿಯಿಂದ ಕಂಡು, ಅರ್ಥಮಾಡಿಕೊಳ್ಳುವ ಬದಲು ಅವರನ್ನು ಸ್ವಾರ್ಥಿಗಳಂತೆ, ದುರಾಸೆಯ ಹೆಂಗಸಿನಂತೆ, ಗಂಡುಬೀರಿಯೆಂಬಂತೆ, ಅವರಿಗೆ ಇತರೆ ಸಾಮಾನ್ಯ ಮಹಿಳೆಯರಿಗೆ ಬೇಕಾದ ಯಾವುವೂ ಬೇಡವೇನೋ ಎಂಬಂತಹ ನಡವಳಿಕೆಯನ್ನು ತೋರಿಸಬಹುದು. ಬೇಕೆಂದೇ ಕಡೆಗಣಿಸಬಹುದು. ಇದು ಅವರನ್ನು ಇನ್ನಷ್ಟು ಅಂತರ್ಮುಖಿಗಳನ್ನಾಗಿ ಮಾಡಬಹುದು.

ಅವಳ ಯಶಸ್ಸಿಗೆ ಕೈ ಜೋಡಿಸದೆ, ಕಾಲನ್ನು ಸದಾ ಅಡ್ಡವಾಗಿ ಚಾಚಿ ಬೀಳಿಸಲು ಯತ್ನಿಸಿದ ಸಂಗಾತಿಗಳ ಉಪಟಳದ ಕಾರಣ ಅದೆಷ್ಟೋ ಮಂದಿ ಒಂಟಿಯಾಗಿ ಬದುಕುತ್ತಿದ್ದಾರೆ. ಹೇಗೋ ಯಶಸ್ವಿಯಾದ ನಂತರ ಅವಳ ದುಡಿಮೆಯನ್ನು ದುರುಪಯೋಗಪಡಿಸಿಕೊಳ್ಳುವ ಕುಟುಂಬ ಮತ್ತು ದುಡಿಯುವ ಹಣವನ್ನೆಲ್ಲ ಉಡಾಯಿಸುವ ಸಂಗಾತಿಗಳ ಕಾರಣ ಈ ಮಹಿಳೆಯರು ಜಿಗುಪ್ಸೆಗೊಂಡು ಒಂಟಿಯಾಗುತ್ತಿದ್ದಾರೆ.

ಹೆಂಡತಿಯ ಯಶಸ್ಸೇ ತನ್ನ ಬದುಕಿನ ದೊಡ್ಡ ದುರಂತವೆಂಬಂತೆ ಸದಾ ಜರಿಯುವ, ಸಮಾಜದಲ್ಲಿ ಅವರನ್ನು ಕೆಳಗೆ ಬೀಳಿಸಲು ಯತ್ನಿಸುವ ಗಂಡಂದಿರಿಂದ ವಿಚ್ಛೇದನ ಪಡೆಯುತ್ತಿದ್ದಾರೆ. ಇನ್ನು ಸಮಾಜವೂ ಇದಕ್ಕೆ ಕಲ್ಲು ತೂರಲು ಮುಂದಾಗುತ್ತದೆ. ಕೆಲಸದಲ್ಲಿ ಪದೇ ಪದೇ ಇತರರಿಗಿಲ್ಲದ ಕಟಕಿಗಳು, ಅಸೂಯೆಗಳು ಅವರನ್ನು ಹೈರಾಣಾಗಿಸುತ್ತವೆ. ಹೀಗಾಗಿ ದೊರೆತ ಯಶಸ್ಸನ್ನು ಅನುಭವಿಸಲಾಗದೆ ಅದನ್ನು 'ಡೌನ್ ಪ್ಲೇ' ಮಾಡಬೇಕಾದ ಅಗತ್ಯಗಳು ಕೂಡ ಇಂತಹ ಮಹಿಳೆಯರಿಗೆ ಎದುರಾಗುತ್ತವೆ.

'ತಮ್ಮನ್ನು ಇತರರು ಅರ್ಥಮಾಡಿಕೊಳ್ಳಬಲ್ಲರೇ?' ಎಂಬ ಶಂಕೆ ಯಶಸ್ವಿ ಮಹಿಳೆಯರನ್ನು ಕಾಡಬಹುದು. ತಮ್ಮ ಬದುಕಿನ ನಿರಾಶೆಗಳ ಹತಾಶೆಯಲ್ಲಿ ಮೋಸಹೋದರೆ ಎಂಬ ಭಯದಲ್ಲಿ ಅವರು ಇತರರೊಡನೆ ಬೆರೆಯಲು ಹಿಂಜರಿಯಬಹುದು. ಎಲ್ಲರಂತೆ ಇದ್ದರೆ ಸಮಾಜ ಅದನ್ನು ಹಗುರವಾಗಿ ತೆಗೆದುಕೊಂಡು ತಮ್ಮನ್ನು ಬಳಸಿಕೊಳ್ಳಬಹುದು ಎಂಬ ಅಂಜಿಕೆಯಿಂದ ಹೆಚ್ಚು ಜನರೊಡನೆ ಬೆರೆಯದೇ ಹೋಗಬಹುದು. ತಮ್ಮಿಂದ ಅತಿಯಾದದ್ದೇನನ್ನೂ ಬಯಸದ ಮುದ್ದು ಪ್ರಾಣಿಗಳ ಸಂಗದಲ್ಲಿ ಅಥವಾ ಸಿನಿಮಾ, ಟೀವಿಗಳನ್ನು ವೀಕ್ಷಿಸುವುದರಲ್ಲಿ ವ್ಯಸ್ತರಾಗಿ ತಮ್ಮ ಸಂಜೆಗಳನ್ನು ದೂಡಬಹುದು. ಅವರ ಈ ಆಳವಾದ ನೋವುಗಳನ್ನು ಹೇಳಿಕೊಂಡರೆ ತಾವು ಸಾಧಿಸಿದ ಎಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗಬಹುದು ಎಂಬ ಅಂಜಿಕೆಗೆ ಬೀಳಬಹುದು. ಬಹುತೇಕರು ಇಂತಹವರೇ ಆದ ಕಾರಣ ಉತ್ತಮರನ್ನು ಗುರುತಿಸುವಲ್ಲಿ ಕೂಡ ಎಡವಬಹುದು. ಅವರು ಇಂತಹ ಮನಸ್ಥಿತಿಗೆ ಬಂದು ತಲುಪಲು ಬದುಕಿನುದ್ದಕ್ಕೂ ಅವರು ಅನುಭವಿಸಿದ ವ್ಯವಸ್ಥಿತ ತಾರತಮ್ಯಗಳೂ ಕಾರಣವಾಗಬಹುದು.

## ವ್ಯವಸ್ಥಿತ ತಾರತಮ್ಯ ಮತ್ತು ಪೂರ್ವಗ್ರಹ

ಹೆಣ್ಣು ಹೆಚ್ಚು ಓದಿದರೆ ಯಾವ ಗಂಡಸೂ ಅವಳನ್ನು ಮದುವೆಯಾಗುವುದಿಲ್ಲ ಎಂಬುದು ನಮ್ಮ ಸಮಾಜದಲ್ಲಿ ಎಂದಿನಿಂದಲೂ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆ ಬರೆದ ಸಾಹಿತ್ಯವನ್ನು ಪುರುಷನ ಹೆಸರಿನಲ್ಲಿ ಮುದ್ರಿಸುವ ಸಮಯವೂ ಇತ್ತು. ಆಕೆಗೆ ಮತ ಚಲಾವಣೆಯನ್ನು ನೀಡಿದ್ದೇ ಒಂದು ದೊಡ್ಡ ವಿಚಾರವೆಂಬಂತೆ ಇತಿಹಾಸ ದಾಖಲಿಸಿದೆ.

ಇಷ್ಟೆಲ್ಲ ಕಸರತ್ತಿನ ಹಿಂದಿರುವುದು 'ಅವಳು ನನ್ನನ್ನು ಹಿಂದಿಕ್ಕಿದರೆ' ಎನ್ನುವ ಗಂಡಸಿನ ಭಯ. ಪೈಪೋಟಿಯಲ್ಲಿ ತಾನೇ ಮೊದಲಿರಬೇಕು ಎನ್ನುವ ತೀವ್ರ ಹಂಬಲ ಅವನನ್ನು ಆ ರೀತಿಯ ವರ್ತನೆಗೆ ಪ್ರಚೋದಿಸುತ್ತದೆ. ದೈಹಿಕವಾಗಿ ಸರಿಸಮಳಲ್ಲದ ಮಹಿಳೆಯರನ್ನು ನಿಯಂತ್ರಿಸಬೇಕು ಎನ್ನುವ